ಓ ಎಸ್ ನಂ.89/2018

ಡಿ .ಡಬ್ಲ್ಯೂ :5

ದಿನಾಂಕ : 05-06-2026 ರಂದು ಸಾಕ್ಷಿಯನ್ನು ಕರೆಯಿಸಿ ಸತ್ಯ ಪ್ರತಿಜ್ಞೆ ಬೋಧಿಸಲಾಯಿತು.

ಪಾಟೀ ಸವಾಲುಃ ವಾದಿ ಪರ ವಕೀಲರಿಂದಃ

ನಾನು SSLC ವ್ಯಾಸಂಗ ಮಾಡಿದ್ದೇನೆ . ವಾದಿ ನನ್ನ ಚಿಕ್ಕಪ್ಪ . ದಾವಾ ಸ್ವತ್ತಿನ ಬಗ್ಗೆ ತಿಳಿದಿದೆ . ದಾವಾ ಸ್ವತ್ತಿನ ವಿಸ್ತೀರ್ಣ 107x33 ಅಡಿಗಳು ಇರುತ್ತದೆ . ದಾವಾ ಸ್ವತ್ತಿನ ಪೂರ್ವ ಪಶ್ಚಿಮಕ್ಕೆ ಪಂಚಾಯಿತಿ ರಸ್ತೆ , ಉತ್ತರಕ್ಕೆಃ ರಾಮಯ್ಯ ರವರ ಸ್ವತ್ತು , ದಕ್ಷಿಣಕ್ಕೆ ಃಪಾಳು ಜಾಗ . ಸದರಿ ಪಾಳು ಜಾಗ ಯಾರಿಗೆ ಸೇರಿದ್ದು ಎಂದು ಗೊತ್ತಿಲ್ಲ . ನನ್ನ ತಂದೆ ಕೆ ಟಿ ನಾರಾಯಣಪ್ಪ ದಿಃ 25-07-2017 ರಂದು ಮರಣ ಹೊಂದಿದ್ದಾರೆ . ನಿಪಿ -13 ದಾಖಲೆಯನ್ನು ತೋರಿಸಲಾಗಿ ಮತ್ತು ನಿಮ್ಮ ತಂದೆಯ ಸಹಿಯನ್ನು ಗುರುತಿಸಬಹುದೇ ಎಂದು ಪ್ರಶ್ನಿಸಲಾಗಿ ಸಾಕ್ಷಿಯು ಅದನ್ನು ನೋಡಿ ಅದರಲ್ಲಿ ನನ್ನ ತಂದೆಯ ಸಹಿ ಇರುವುದಿಲ್ಲ ಎಂದು ತಿಳಿಸಿದ್ದಾರೆ . ದಿಃ 17-04-2014 ರಂದು ನನ್ನ ತಂದೆ , ಹರೀಶ್ , ಜಯಮ್ಮ ಅಲಿಯಾಜ್ ಜಯಲಕ್ಷ್ಮಮ್ಮ, ಕೆ ಟಿ ರಾಜಣ್ಣ ಮತ್ತು ಮಂಗಳಮ್ಮ ರವರು ಸೇರಿ ವಾದಿಗೆ ದಾವಾ ಸ್ವತ್ತಿಗೆ ಸಂಬಂಧಿಸಿ ನಿಪಿ -13 ನ್ನು ಬರೆದುಕೊಟ್ಟಿದ್ದಾರೆ ಎಂದರೆ ನನಗೆ ಗೊತ್ತಿಲ್ಲ . ನಿವೇಶನಕ್ಕೆ ಸಂಬಂಧಿಸಿ ವಾದಿಯು ಈ ದಾವೆಯನ್ನು ಸಲ್ಲಿಸಿದ್ದಾರೆ . ದಾವಾ ಸ್ವತ್ತು ಮೂಲತಃ ನನ್ನ ತಾತ ತಿಮ್ಮಶೆಟ್ಟಿ ರವರಿಗೆ ಸೇರಿದ್ದು . ಅವರಿಗೆ 14 ಜನ ಮಕ್ಕಳಿದ್ದಾರೆ . 01-08-2018 ರಂದು 8 ನೇ ಪ್ರತಿವಾದಿಗೆ ದಾವಾ ಸ್ವತ್ತಿನ ಕ್ರಯದ ಕರಾರು ಪತ್ರ ಮಾಡಿಕೊಟ್ಟಿದ್ದೇವೆ . ಸದರಿ ದಿನದಂದು ನಾನು , ಹರೀಶ್ , ಜಯಲಕ್ಷ್ಮಮ್ಮ , ನಾಗರಾಜು , ಮಂಗಳಮ್ಮ , ಕೆ ಟಿ ರಾಜಣ್ಣ ಹಾಜರಿದ್ದೆವು . ನನ್ನ ತಂದೆ ತಾಯಿಗೆ ನಾವು 5 ಜನ ಮಕ್ಕಳು . ನಿಡಿ -2 ಕ್ಕೆ ನನ್ನ ತಂದೆಯ ಪರವಾಗಿ ನಾನು ಮತ್ತು ನನ್ನ ಅಣ್ಣ ಅನಂತ ಕುಮಾರ್ ರವರು ಸಹಿ ಮಾಡಿದ್ದೇವೆ . ಉಳಿದ ಮಕ್ಕಳಿಗೆ ತಿಳಿಸಿರಲಿಲ್ಲವೇ ಎಂದರೆ ಕ್ರಯ ಪತ್ರ ನೋಂದಾಯಿಸಿಕೊಡುವಾಗ ಕರೆದುಕೊಂಡು ಹೋಗೋಣಾ ಎಂದು ಹೇಳಿರಲಿಲ್ಲ ಎಂದು ತಿಳಿಸಿದ್ದಾರೆ . ದಿಃ 21-08-2018 ವಾದಿಯಿಂದ ನನಗೆ ಯಾವುದೇ ನೋಟಿಸ್ ಬಂದಿಲ್ಲ . ದಿಃ 16-09-2018 ರಂದು ಸದರಿ ನೋಟಿಸ್ ಗೆ ನನ್ನ ಅಣ್ಣ ಅನಂತ್ ಕುಮಾರ್ ರವರ ಹೆಸರಿನಲ್ಲಿ ವಕೀಲರ ಮುಾಲಕ ಪ್ರತ್ಯುತ್ತರ ಕೊಡಿಸಿದ್ದೇನೆ ಎಂದರೆ ನನಗೆ ಗೊತ್ತಿಲ್ಲ ಎಂದು ಸಾಕ್ಷಿಗೆ ಹೇಳಿದ್ದಾರೆ .

ದಾವಾ ಸ್ವತ್ತು ತಿಮ್ಮಶೆಟ್ಟಿ ರವರು 14 ಜನ ಮಕ್ಕಳಿಗೆ ಪಿತ್ರಾರ್ಜಿತ ಸ್ವತ್ತು ಎಂದರೆ ಸರಿ . ನಿಡಿ -2 ಕ್ಕೆ 1 ರಿಂದ 7 ನೇ ಪ್ರತಿವಾದಿಗಳನ್ನು ಹೊರತುಪಡಿಸಿ ತಿಮ್ಮಶೆಟ್ಟಿ ರವರ ಉಳಿದ ಮಕ್ಕಳಿಂದ ಸಹಿ ಪಡೆದಿಲ್ಲ ಎಂದರೆ ಸರಿ . ವಾದಿಗೂ ಸಹಾ ದಾವಾ ಸ್ವತ್ತಿನ ಮೇಲೆ ಹಕ್ಕು ಇದೆ ಎಂದರೆ ಸರಿ . 8 ನೇ ಪ್ರತಿವಾದಿಗೆ ಕ್ರಯದ ಕರಾರು ಪತ್ರ ಬರೆದುಕೊಡುವಾಗ ವಾದಿಗೆ ವಿಚಾರವನ್ನು ತಿಳಿಸಿರಲಿಲ್ಲ . ನಾವು ಯಾರು ಸಹಾ ಸ್ವತ್ತನ್ನು ವಿಭಾಗಿಸಿಕೊಂಡಿಲ್ಲ ಎಂದು ಸಾಕ್ಷಿ ಮುಂದುವರೆದು ಹೇಳಿದ್ದಾರೆ . ವಾದಿಗೆ 8 ಲಕ್ಷ ರೂಗಳಿಗೆ ದಾವಾ ಸ್ವತ್ತನ್ನು ಮಾರಾಟ ಮಾಡುವುದಾಗಿ ಒಪ್ಪಿ 1 ರಿಂದ 7 ನೇ ಪ್ರತಿವಾದಿಗಳು ಅವರಿಂದ 2 ಲಕ್ಷ ಹಣವನ್ನು ಮುಂಗಡ ಪಡೆದು ನಿಪಿ -13 ನ್ನು ಬರೆದುಕೊಟ್ಟಿದ್ದಾರೆ ಎಂದರೆ ನನಗೆ ಗೊತ್ತಿಲ್ಲ . ನಿಡಿ -2 ನ್ನು ಬರೆದುಕೊಡುವ ಸಮಯ 12,50,000/- ರೂ ಗಳಿಗೆ ಮಾರಾಟಕ್ಕೆ ಒಪ್ಪಿದ್ದೆವು , ರೂ . 2,85,000/- ಮುಂಗಡ ಪಡೆದಿದ್ದೇವೆ . ಸದರಿ ವಿಚಾರವನ್ನು ನಿಡಿ -2, ಪ್ರತಿರಕ್ಷಣಾ ಪತ್ರ ಮತ್ತು ಮುಖ್ಯ ವಿಚಾರಣೆಯಲ್ಲಿ ನಮೂದು ಮಾಡಿಲ್ಲ . ನಿಪಿ -13 ರಂತೆ ವಾದಿಗೆ ಕರಾರು ಪತ್ರ ಬರೆದುಕೊಟ್ಟು ನಂತರ ಜಯಲಕ್ಷ್ಮಮ್ಮ ರವರ ಹೆಸರಿಗೆ ಖಾತೆ ಬದಲಾವಣೆ ಮಾಡಿಕೊಂಡು 8 ನೇ ಪ್ರತಿವಾದಿಗೆ ಕರಾರು ಪತ್ರ ಬರೆದುಕೊಟ್ಟಿದ್ದೇವೆ ಎಂದರೆ ಸಾಕ್ಷಿಯು ನಾವು ಸ್ವತ್ತನ್ನು ವಿಭಾಗಿಸಿಕೊಂಡಿಲ್ಲ , ನಾವು ನನ್ನ ತಂದೆಯ ಭಾಗದ ಸ್ವತ್ತನ್ನು ಕೇಳುತ್ತಿದ್ದೇನೆ ಎಂದು ತಿಳಿಸಿದ್ದಾರೆ . ನಿಪಿ -13 ರ ಶರತ್ತಿನ ಪ್ರಕಾರ ವಾದಿಯೂ ಸಹಾ 6 ಲಕ್ಷ ಬಾಕಿ ಹಣ ನೀಡಿ ಕ್ರಯದ ಕರಾರು ಪತ್ರ ನೋಂದಾಯಿಸಿಕೊಳ್ಳಲು ಸಿದ್ದರಿದ್ದಾರೆ ಎಂದರೆ ನನಗೆ ಗೊತ್ತಿಲ್ಲ . ವಾದಿಗೆ ಸೇರಬೇಕಾದ ದಾವಾ ಸ್ವತ್ತಿನ ಸಂಬಂಧ 8 ನೇ ಪ್ರತಿವಾದಿಗೆ ಕ್ರಯದ ಕರಾರು ಪತ್ರ ಬರೆದುಕೊಟ್ಟು ಈಗ 8 ನೇ ಪ್ರತಿವಾದಿಯ ಪರವಾಗಿ ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ .

ಮರು ವಿಚಾರಣೆ ಇಲ್ಲ .

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಗಿದೆ)

ಓದಿ ಹೇಳಿ, ಕೇಳಿದೆ, ಸರಿ ಇದೆ, ಎಂದರು.

SD/-
(ಅನುಪಮ.ಡಿ. )
ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಜೆಎಂಎಫ್‌ಸಿ, ಗುಬ್ಬಿ .